ಶ್ರೀ ಜೆ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರೋಣ ನಗರದ ಪರಿಶಿಷ್ಟ ಜಾತಿ ಬಾಲಕಿಯರ ವಿದ್ಯಾರ್ಥಿನಿಲಯದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ಪಹಿಸಲಾಗಿದ್ದು, ೧೯೮೬–೮೮ನೇ ಸಾಲಿನಲ್ಲಿ ನಿರ್ಮಾಣದ ಕಾರ್ಯಾದೇಶವನ್ನು ಕೈಗೊಳ್ಳಲಾಗುವುದು.

ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ನೋಂದಾವಣೆ ಶುಲ್ಕ

೫೨೧. ಶ್ರೀ ಆರ್. ವೆಂಕಟರಾವಮಯ್ಯ (ವಂಗಳಬಾಗಿಲು) .—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೆಂದು ಸಾವಿರಕ್ಕೆ ೨೦ ರೂ.ಗಳಂತೆಯೂ ಮತ್ತು ಸ್ಟ್ಯಾಂಪ್ ಶುಲ್ಕವೆಂದು ೧೦ ಸಾವಿರದ ನಂತರ ಸಾವಿರಕ್ಕೆ ೩೫ ರೂ. ಗಳಂತೆಯೂ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಾಯಿದೆಯಲ್ಲಿ ಈ ಬಗ್ಗೆಯ ವಸೂಲಾತಿಗೆ ಅವಕಾಶವಿಲ್ಲವಿರುವುದರಿಂದ ಸರ್ಕಾರದವರು ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಇ) ಸದರಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೂ ಅತೀ ಹೆಚ್ಚಾಗುತ್ತಿದ್ದು ಬಡವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಸರ್ಕಾರದ ಅಧಿಸೂಚನೆ ಕ್ರಮ ಸಂಖ್ಯೆ ಆರ್. ಡಿ. ೪೦೩ ಇ. ಎಸ್. ಆರ್. ೮೫ ದಿನಾಂಕ ೨೭–೫–೮೬ರ ಅನ್ವಯ ನೋಂದಣಿ ಶುಲ್ಕ ಪ್ರತಿ ಸಾವಿರಕ್ಕೆ ರೂ. ೨೦ ರಂತೆ ದಿನಾಂಕ ೨–೬–೧೯೮೬ ರಿಂದ ವಸೂಲು ಮಾಡಲಾಗುತ್ತಿದೆ. ರೂ. ೧೦,೦೦೦–೦೦ ಮೀರಿದ ಸಾಲಕ್ಕೆ ಬರೆದುಕೊಡುವ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ಹಾಗೂ ಅಧಿಭಾರ ಶುಲ್ಕವೂ ಸೇರಿದಂತೆ ಪ್ರತಿ ಸಾವಿರಕ್ಕೆ ರೂ. ೨೫–೦೦ ರೂ. ೩೫–೦೦ ಹಾಗೂ ೪೫–೦೦ ರೂ.ಗಳಂತೆ ಅಧಿಭಾರವೂ ಆಯಾ ಸ್ಥಳಗಳಲ್ಲಿ ಜಾರಿ ಇರುವಂತೆ ಪ್ರತಿಶತ ೧, ೨ ಹಾಗೂ ೩ ಪ್ರಕಾರ ವಸೂಲಿ ಮಾಡಲಾಗುತ್ತಿದೆ.

ಆ) ಈ ಶುಲ್ಕವನ್ನು ಕಾನೂನು ರೀತಿ ವಸೂಲು ಮಾಡಲಾಗುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ನೋಂದಣಿ ಶುಲ್ಕವು ನ್ಯಾಯಬದ್ಧವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ '' ಇ '' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಕಟ್ಟಡ ಕುರಿತು.

೫೮೯. ಶ್ರೀ ನೀಲಕಂಠ ಗೌಡ್ರು (ಶಿಗ್ಗಾಂ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂ ತಾಲ್ಲೂಕು ದುಂದಶಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಕಟ್ಟುವ ವಿಚಾರವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಎಂದು ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು,

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೯೮೭–೮೮ನೇ ಸಾಲಿನ ಆಯವ್ಯಯದಲ್ಲಿ ಹಣಕಾಸಿನ ಅನುಕೂಲತೆಗಳನ್ನು ನೋಡಿಕೊಂಡು ಈ ವಿಚಾರ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಒಕ್ಕಲುತನ ಉತ್ಪಾದಕಗಳ ಮಾರಾಟ ಸಮಿತಿಗಳ ಬಗ್ಗೆ

೮೧೪. (ಉ) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿಯ ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಒಟ್ಟು ಸಂಖ್ಯೆ. ಎಷ್ಟು (ಹೆಸರು ಅಡಳಿತ ವ್ಯಾಪ್ತಿ ಕ್ಷೇತ್ರ ವಿವರಣೆ ನೀಡುವುದು)?

ಆ) ಮೇಲಿನ ಪ್ರತಿಯೊಂದು ಸಮಿತಿಯಿಂದ ೧೯೮೦, ೧೯೮೫–೮೪ ಹಾಗೂ ೧೯೮೫–೮೬ರಲ್ಲಿಯಂ ಸೆಸ್ಸ್ ವರಮಾನದ ಮೊತ್ತವೆಷ್ಟು ಹಾಗೂ ಈ ಹುಟ್ಟುವಳಿ ಸಮಿತಿಯಲ್ಲಿ ಮಾರಾಟಕ್ಕೆ ಬರುವ ಪ್ರಮುಖ ಹುಟ್ಟುವಳಿಯ ಪ್ರಮಾಣವೆಷ್ಟು ತಿಳಿಸುವುದು.

ಇ) ರಾಜ್ಯದಲ್ಲಿಯ ಪ್ರಮುಖವಾದ ಹಾಗೂ ಹೆಚ್ಚು ಆದಾಯ ಕೊಡುವ ಮೂರು ಪ್ರಥಮ ಸದರಿ ಸಮಿತಿಗಳ ಸೆಸ್ಸ್ ವಂಂಲಕ ಬರುವ ಆದಾಯವೆಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿಯ ಮಾರುಕಟ್ಟೆ ಸಮಿತಿಗಳು ಒಟ್ಟು ಸಂಖ್ಯೆ. ೧೨೫ ವಿವರಗಳನ್ನು ಅನುಬಂಧ–೧ ರಲ್ಲಿ ಕೊಡಲಾಗಿದೆ.

ಆ) ೧೯೮೦–೮೧ ರೂ. ೮,೫೫,೭೫,೭೬೯–೧೭
೧೯೮೫–೮೪ ರೂ. ೧೫,೭೯,೭೪,೩೮೭–೪೦
೧೯೮೫–೮೬ ರೂ. ೧೧,೮೭,೩೩,೪೦೪–೧೨

ವಿವರಗಳನ್ನು ಅನುಬಂಧ–೨ರಲ್ಲಿ ಕೊಡಲಾಗಿದೆ. ಪ್ರಮುಖ ಹುಟ್ಟುವಳಿಗಳ ಪ್ರಮಾಣವನ್ನು ಅನುಬಂಧ–೩ರಲ್ಲಿ ಕೊಡಲಾಗಿದೆ.

ಇ) ಬೆಂಗಳೂರು, ಮಂಗಳೂರು ಮತ್ತು ರಾಯಚೂರು ಮಾರುಕಟ್ಟೆ ಸಮಿತಿಗಳ ವಿವರ ಈ ಕೆಳಗಿನಂತಿದೆ.—

(ರೂಪಾಯಿ ಲಕ್ಷಗಳಲ್ಲಿ)

ವರ್ಷ	ಬೆಂಗಳೂರು ಸಮಿತಿ	ಮಂಗಳೂರು ಸಮಿತಿ	ರಾಯಚೂರು ಸಮಿತಿ
೧	೨	೩	೪
೧೯೮೪-೮೫	೧೨೪.೫೬	೬೮.೦೨	೮೧.೪೫
೧೯೮೫–೮೬	೧೨೭.೬೬	೯೮.೫೮	೬೬.೯೪
೧೯೮೬–೮೭ (ಡಿಸೆಂಬರ್ ೧೯೮೬ರವರೆಗೆ)	೧೩೮.೪೫	೮೦.೬೯	೪೯.೮೧